Á

# ಪ್ರಬೋಧಿನೀ ಗುರುಕುಲಮ್

## 2024-2025 ನೇ ಸಾಲಿನ ಸೆಪ್ಟೆಂಬರ್ ತಿಂಗಳವರೆಗಿನ ಅರ್ಧವಾರ್ಷಿಕ ಶೈಕ್ಷಣಿಕ ಚಟುವಟಿಕೆಗಳ ವರದಿ

- **ವೇದ ಶಿಕ್ಷಾ ವರ್ಗ** (Ref: VEDASHIKsHAVARGA in photo Gallery)
  2024-25 ನೇ ಸಾಲಿನ ವೇದ ಶಿಕ್ಷಾವರ್ಗವು ದಿನಾಂಕ 14-04-2024 ರ ಭಾನುವಾದದಂದು ಉದ್ಘಾಟನೆಗೊಂಡಿದ್ದು ಕನಾಟಕದ 14 ಜಿಲ್ಲೆ, 27 ತಾಲ್ಲೂಕು,43 ಸ್ಥಾನಗಳಿಂದ ಆಯ್ಕೆಯಾದ 59 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದರು.
  ವೇದ ಶಿಕ್ಷಾವರ್ಗದ ಸಮಾರೋಪ ಕಾರ್ಯಕ್ರಮವು 27-04-2024 ರ ಶನಿವಾರದಂದು ಬೆಳಿಗ್ಗೆ 10:30 ಕ್ಕೆ ನಡೆದಿದ್ದು, ಈ ಕಾರ್ಯಕ್ರಮದಲ್ಲಿ ಶ್ರೀ ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನೃಸಿಂಹ ಪೀಠಮ್. ದಿವ್ಯಕ್ಷೇತ್ರ ಹರಿಹರಪುರದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ದಿವ್ಯಸಾನ್ನಿಧ್ಯವನ್ನು ವಹಿಸಿಕೊಂಡು ಆಶೀರ್ವಚನ ನೀಡಿದರು ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ವಿಭಾಗದ ನಿವೃತ್ತ ಜಂಟಿ ನಿರ್ದೇಶಕರೂ, ಸಂಸ್ಕೃತ ವಿದ್ವಾಂಸರೂ ಹಾಗೂ ಗುರುಕುಲ ಶಿಕ್ಷಣ ಮಾರ್ಗದರ್ಶಕ ಮಂಡಳಿಯ ಹಿರಿಯರೂ ಆದ ವಿದ್ವಾನ್ ಟಿ.ಎನ್. ಪ್ರಭಾಕರ, ಮೈಸೂರು. ಇವರು ಮುಖ್ಯ ವಕ್ತಾರರಾಗಿ ಪಾಲ್ಗೊಂಡರು.
- **ನೂತನ ಛಾತ್ರ ಪ್ರವೇಶೋತ್ಸವ.** (Ref: Praveshotsava-2024 in photo Gallery)
  **ದಿನಾಂಕ 08-07-2024 ರ ಸೋಮವಾರದಂದು** ಪ್ರಬೋಧಿನೀ ಗುರುಕುಲದಲ್ಲಿ ಪ್ರತೀ ವರ್ಷದಂತೆಯೇ **ನೂತನ ಛಾತ್ರ ಪ್ರವೇಶೋತ್ಸವ** ನಡೆಯಿತು. ಕರ್ನಾಟಕದ 14 ಜಿಲ್ಲೆ 19 ತಾಲ್ಲೂಕುಗಳಿಂದ ಆಯ್ಕೆಯಾದ 20 ವಿದ್ಯಾರ್ಥಿಗಳು ಅಂದು ಬೆಳಿಗ್ಗೆ ನಡೆದ "**ಪಂಚಗವ್ಯ ಹೋಮ**" ದ ಮೂಲಕ ವಿಧಿವತ್ತಾಗಿ ಗುರುಕುಲಕ್ಕೆ ಪ್ರವೇಶ ಪಡೆದರು. **ಉಡುಪಿಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥಮಹಾಸ್ವಾಮಿಗಳವರು** ಮಕ್ಕಳಿಗೆ ಪ್ರಥಮ ಪಾಠ ನೆರವೇರಿಸಿಕೊಟ್ಟರು. **ಕರ್ನಾಟಕ ಉತ್ತರ, ಕರ್ನಾಟಕ ದಕ್ಷಿಣ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಪ್ರಾಂತಗಳನ್ನೊಳಗೊಂಡ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಕಾರ್ಯಕಾರಿಣಿ ಸದಸ್ಯರೂ, ನಾಡಿನ ಪ್ರತಿಷ್ಠಿತ, ಬೆಂಗಳೂರಿನ "ದಿ ಮಿಥಿಕ್ ಸೊಸೈಟಿ" ಯ ಅಧ್ಯಕ್ಷರೂ ಆದ ಶ್ರೀ ವಿ. ನಾಗರಾಜ್** ರವರು ಮುಖ್ಯ ಭಾಷಣ ನಡೆಸಿಕೊಟ್ಟರು.
- **ವಿಶ್ವಯೋಗದಿನ** ದ ನಿಮಿತ್ತ ಜೂನ್ 15 ರಿಂದ 21 ರ ವರೆಗೆ ಸುತ್ತಮುತ್ತಲಿನ 4 ಪ್ರಾಥಮಿಕಶಾಲೆ 2 ಪ್ರೌಢಶಾಲೆ ಹಾಗೂ ಒಂದು ಕಾಲೇಜಿನಲ್ಲಿ **ಪ್ರಬೋಧಿನೀ ಗುರುಕುಲದ ವಿದ್ಯಾರ್ಥಿಗಳು ಯೋಗ ಸಪ್ತಾಹ ನಡೆಸಿಕೊಟ್ಟರು**. (Ref: International Day of Yoga-2024 in photo Gallery)
- **ಆಗಸ್ಟ್ 18 ರಂದು ಗುರುಕುಲದಲ್ಲಿ ಭತ್ತದ ನಾಟಿ ನಡೆಯಿತು.** ಈ ಬಾರಿ ಅಧಿಪ್ರಜ್ಞಾ ವಿದ್ಯಾರ್ಥಿಗಳು (ಕಾಲೇಜು ಸ್ತರ) **20 ಅಪರೂಪದ ಭತ್ತದ ತಳಿಗಳನ್ನು ಸಂರಕ್ಷಿಸಿ ಅವುಗಳನ್ನೇ ನಾಟಿ ಮಾಡಿರುವುದು ವಿಶೇಷ.**

- **ಈ ಬಾರಿ ರಕ್ಷಾ ಬಂಧನದ ಸಮಯದಲ್ಲಿ** ಗುರುಕುಲದ ಸುತ್ತಮುತ್ತಲಿನ 20 ಗ್ರಾಮಗಳ 1736 ಮನೆಗಳು ಹಾಗೂ 6 ಶಾಲೆಗಳನ್ನು ಸಂಪರ್ಕಿಸಿ 5166 ರಕ್ಷೆಗಳನ್ನು ಕಟ್ಟಿರುತ್ತಾರೆ
- **ಪ್ರತೀ ವರ್ಷದಂತೆಯೇ ಈ ವರ್ಷವೂ ಸಹ ಶ್ರೀ ಕೃಷ್ಣಜನ್ಮಾಷ್ಟಮೀ ಹಾಗೂ ಗಣೇಶೋತ್ಸವ** ಗಳನ್ನು ಅರ್ಥವತ್ತಾಗಿ ಆಚರಿಸಿದ್ದೇವೆ
- **ಈ ಸಾಲಿನ ಅರ್ಧವಾರ್ಷಿಕ ಪಾಲಕ ಪ್ರಶಿಕ್ಷಣವು ದಿನಾಂಕ 15-09-2024** ರ ಭಾನುವಾರದಂದು ನಡೆಯಿತು. ಹಿರಿಯರಾದ ಶ್ರೀ ನಾರಾಯಣ ಶೇವಿರೆ ಯವರು ಉದ್ಘಾಟನೆ ನಡೆಸಿಕೊಟ್ಟರು. ಗುರುಕುಲದ ಸುತ್ತಮುತ್ತಲಿನ ಅನೇಕ ಹಿರಿಯ ವಿದ್ವಾಂಸರು ಪಾಲಕರಿಗೆ ಸಾವಯವ ಕೃಷಿ, ಸ್ವದೇಷೀ, ಭಾರತೀಯ ಜೀವನ ಶೈಲಿ, ಸಂಸ್ಕೃತ ಭಾಷೆಯ ಮಹತ್ವ, ಮುಂತಾದ ಅವಧಿಗಳನ್ನು ತೆಗೆದುಕೊಂಡ್ಡರು. ಪ್ರಶಿಕ್ಷಣ ದ ಸಮಾರೋಪದಲ್ಲಿ ಆರೆಸ್ಸೆಸ್ ನ ಕರ್ನಾಟಕ ದಕ್ಷಿಣ ಪ್ರಾಂತ ಬೌದ್ಧಿಕ ಪ್ರಮುಖ್ ಶ್ರೀ ಕೃಷ್ಣಪ್ರಸಾದ್ ರವರು "ಪಂಚ ಪರಿವರ್ತನೆ" ಬಗ್ಗೆ ಮಾತನಾಡಿದರು. ಅಂದು ಸಂಜೆ 04 ರಿಂದ ಗುರುಕುಲದ ಮಕ್ಕಳು "ವೀರಮಣಿ ಕಾಳಗ" ಎಂಬ ಪೌರಾಣಿಕ ಯಕ್ಷಗಾನ ಪ್ರದರ್ಶನ ನಡೆಸಿಕೊಟ್ಟರು.
- ಶ್ರೀ ನಾರಾಯಣ ಶೇವಿರೆಯವರು ದಿನಾಂಕ 16-09-2024 ರಂದು ಪುಣ್ಯ ಶ್ಲೋಕ ಅಹಲ್ಯಾ ಬಾಯಿ ಹೋಳಕರ್ ರವರ ಕಥೆಯನ್ನು ವಿದ್ಯಾರ್ಥಿಗಳಿಗೆ ಹೇಳಿದರು.
- ದಿನಾಂಕ 04-10-2024 ರಿಂದ 11-10-2024 ರ ತನಕ ನಡೆದ ಆರೆಸ್ಸೆಸ್ ನ ಪ್ರಾಥಮಿಕ ಶಿಕ್ಷಾವರ್ಗದಲ್ಲಿ ಗುರುಕುಲದ 18 ವಿದ್ಯಾರ್ಥಿಗಳು ಪಾಲ್ಗೊಂಡು ರಾಷ್ಟ್ರೀಯತೆಯ ಕುರಿತಾದ ಶಿಕ್ಷಣ ಪಡೆದಿದ್ದಾರೆ.
- ಈ ವರ್ಷದ ದಸರಾ ಸಂದರ್ಭದಲ್ಲಿ (04-10-2024 ರಿಂದ 12-10-2024 ರ ತನಕ) ಒಂಭತ್ತು ದಿನಗಳ ಪರ್ಯಂತ ಆದಿಶಕ್ತಿಯ ಒಂಭತ್ತು ಅವತಾರಗಳನ್ನು ಆರಾಧಿಸಲಾಯಿತು. ಪ್ರತೀದಿನ ರಾತ್ರಿ ದೇವಿಗೆ ವಿಶೇಷ ಪೂಜೆ ಹಾಗೂ ಅಷ್ಟಾವಧಾನ ಸೇವೆಗಳನ್ನು ನೆರವೇರಿಸಲಾಗಿತ್ತು. ವಿದ್ಯಾರ್ಥಿಗಳು ಸಮೀಪದ ಹರಿಹರಪುರ ಶಾರದಾ ಲಕ್ಷ್ಮೀನರಸಿಂಹ ಪೀಠ ಹಾಗೂ ಶೃಂಗೇರಿಯ ಶ್ರೀ ದಕ್ಷಿಣಾಮ್ನಾಯ ಶಾರದಾ ಪೀಠದಲ್ಲಿ ನಡೆಯುವ ಜಗದ್ಗುರುಗಳ ದರ್ಬಾರ್ ವೀಕ್ಷಿಸಿದರು. ವಿಜಯದಶಮೀ ಪ್ರಯುಕ್ತ ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ಸವ ಆಚರಿಸಲಾಯಿತು. ಗುರುಕುಲದ ಸುತ್ತಮುತ್ತಲಿನ ಪ್ರಮುಖ ಮಾರ್ಗಗಳಲ್ಲಿ ಘೋಷ್ ಸಹಿತ ವಿಜಯದಶಮೀ ಸಂಚಲನವೂ ನಡೆಯಿತು.